ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 5, November-December 2023, Pp. 47-51
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸಮಕಾಲೀನ ಸಮಾಜದ ಮೇಲೆ ಡಿಜಿಟಲ್ ಮಾಧ್ಯಮಗಳ ಪಾತ್ರ

**ಮಹಿಪಾಲ ರಡ್ಡಿ ಕೆ**

ಅತಿಥಿ ಉಪನ್ಯಾಸಕ, ಕೆ.ಈ ಬೋರ್ಡ್ಸ್ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಕಾಲೇಜು, ಧಾರವಾಡ.

***Abstract:***

*ಡಿಜಿಟಲ್ ಮಾಧ್ಯಮಗಳು ಪ್ರಸ್ತುತ ಜನಜೀವನದ ಬದುಕಿನ ಶೈಲಿಯನ್ನು ಪಾಶ್ಚಿಮಾತ್ಯಗೊಳಿಸಿ ತನ್ನತ್ತ ಜನರ ಗಮನವನ್ನು ಸೆಳೆದಿವೆ. ಈ ಮಾಧ್ಯಮಗಳು ಜನರ ಬದುಕಿನ ಬದಲಾವಣೆ ಮತ್ತು ಬೆಳವಣಿಗೆಯ ರಚನೆ ಮತ್ತು ವ್ಯವಸ್ಥೆಗಷ್ಟೆ ಸೀಮಿತವಾಗಿರದೇ ರಾಜಕೀಯ, ಆರ್ಥಿಕ, ಸಾಮಾಜಿಕ, ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ಕಂಡುಬರುತ್ತದೆ. ಡಿಜಿಟಲ್ ಮಾಧ್ಯಮಗಳು ಒಂದೆಡೆ ಸಕಾರತ್ಮಕವಾಗಿ ಸಾಗಿದರೆ ಇನ್ನೊಂದೆಡೆ ಆಕಸ್ಮಿಕವಾಗಿ ಘಟಿಸಿದಂತ ತಪ್ಪುಗಳಿಂದ ವಿಶ್ವಾಸವನ್ನು ಕಳೆದುಕೊಂಡು ಜನರನ್ನು ಆತಂಕಗೊಳಿಸುತ್ತವೆ. ಜಗತ್ತಿನಲ್ಲಿ ಉದ್ಭವಿಸಬಹುದಾದ ಜಟಿಲ ಸಮಸ್ಯೆ ಮತ್ತು ಪ್ರಗತಿದಾಯಕ ಬೆಳವಣಿಗೆಗೆ ಈ ಡಿಜಿಟಲ್ ಮಾಧ್ಯಮಗಳು ಬಹು ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ. ಪ್ರಸ್ತುತ ಅಧ್ಯಯನವು ಜನರ ಸಾಮಾಜಿಕ ಜೀವನದ ಮೇಲೆ ಡಿಜಿಟಲ್ ಮಾಧ್ಯಮಗಳು ಯಾವ ರೀತಿ ಪರಿಣಾಮ ಬೀರುತ್ತಿದೆ ಮತ್ತು ಅದರ ವ್ಯಾಪ್ತಿಯನ್ನು ತಿಳಿಯುವುದು ಹಾಗೂ ಜನರ ದೈನಂದಿನ ಬದುಕಿನಲ್ಲಿ ಡಿಜಿಟಲ್ ಮಾಧ್ಯಮಗಳ ಪ್ರಭಾವವನ್ನು ಕಂಡುಕೊಳ್ಳುವುದು ಈ ಅಧ್ಯಯನದ ಉದ್ದೇಶವಾಗಿದೆ ಮತ್ತು ಡಿಜಿಟಲ್ ಮಾಧ್ಯಮಗಳು ಹೊಂದಿರುವ ದೋರಣೆಯನ್ನು ಕಂಡುಕೊಳ್ಳುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.*

**Keywords:** *ಡಿಜಿಟಲ್ ಮಾಧ್ಯಮಗಳು, ಪ್ರಕೃತಿವಿಕೋಪಗಳು. ಸಂವಹನ ಮತ್ತು ಸಂಪರ್ಕ ಮಾಧ್ಯಮ, ಸಾಮಾಜಿಕ ಜೀವನ.*

## ಪೀಠಿಕೆ

ಸಮಕಾಲೀನ ಸಂದರ್ಭದಲ್ಲಿ ಡಿಜಿಟಲ್ ಮಾಧ್ಯಮಗಳು ಸಮಾಜದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಕ್ಷೇತ್ರದಲ್ಲಿ ತನ್ನದೇ ಆದ ಪಾತ್ರವಹಿಸುತ್ತಿದೆ. ಇಂದು ಡಿಜಿಟಲ್ ಮಾಧ್ಯಮ ನಿಯಂತ್ರಣಕ್ಕೆ ಬಾರದ ಮಿತಿಯನ್ನು ಹೊಂದಿ ಅಗಾಧ ಪರಿಣಾಮ ಬೀರುತ್ತಿವೆ. ಅಂದು ಮಹಾಯುದ್ಧಗಳ ಭಯಬೀತಿ ಇತ್ತು ಆದರೆ ಇಂದು ಡಿಜಿಟಲ್ ಯುದ್ಧಗಳ ಸಮರವೆಂದು ಕರೆದರೆ ಪ್ರಾಯಶಃ ತಪ್ಪಾಗಲಿಕ್ಕಿಲ್ಲ. ಇಂದು ಎಲ್ಲ ವಯೋಮಾನದವರು ತಮ್ಮ ಕಾರ್ಯಚಟುವಟಿಕೆಗಳಿಗೆ ಸುಲಭವಾಗಿ ಡಿಜಿಟಲ್ ಮಾಧ್ಯಮಗಳನ್ನು ಉಪಯೋಗಿಸುತ್ತಿದ್ದಾರೆ. ಆದರೆ ಇದರ ಸಂಕೀರ್ಣತೆ ಮತ್ತು ಬಳಕೆಯ ಉದ್ದೇಶವು ಸಂಪೂರ್ಣ ನಿಖರತೆ ಹೊಂದಿರುವುದಿಲ್ಲ. ಪ್ರತಿಯೊಂದು ಡಿಜಿಟಲ್ ಮಾಧ್ಯಮಗಳ ಬಳಕೆಯು ಅದರ ಪರದೆಯ ಹಿಂದಿನ ಬಿಕ್ಕಟ್ಟಿನ ನಿರ್ವಹಣೆಯ ತಂತ್ರವ್ಯೂಹಗಳನ್ನು ಹೊಂದಿವೆ. ಇವೆಲ್ಲವುಗಳ ಉದ್ದೇಶವು ಲಾಭ, ಪ್ರಚಾರ ಮತ್ತು ಜನಪ್ರಿಯ ಧ್ಯೇಯವನ್ನು ಹೊಂದಿದ್ದರೂ ಸಹ ಬಿಕ್ಕಟ್ಟಿನ ಸಂದರ್ಭದಲ್ಲಿ ಸೂಚನೆ ಮತ್ತು ಎಚ್ಚರಿಕೆಯ ಮುನ್ಸೂಚನೆಗಳನ್ನು ವ್ಯಕ್ತಪಡಿಸುತ್ತವೆ.

***Please cite this article as:*** ಮಹಿಪಾಲ ರಡ್ಡಿ ಕೆ. (2023). ಸಮಕಾಲೀನ ಸಮಾಜದ ಮೇಲೆ ಡಿಜಿಟಲ್ ಮಾಧ್ಯಮಗಳ ಪಾತ್ರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(5), 47–51.

'ಚಾಫೆ' (2009) ಅವರ ಪ್ರಕಾರ ಡಿಜಿಟಲ್ ಮಾಧ್ಯಮದ ಮುಖಾಂತರ ಸುದ್ದಿ ಮಾಹಿತಿಗಳನ್ನು ಸರಳವಾಗಿ ತಲುಪಿಸುವ ಮುಖಾಂತರ ಜನರೊಟ್ಟಿಗೆ ಸಂವಹನ ಸಾಧಿಸುವುದಾಗಿದೆ. ಆದರೆ ಇದಕ್ಕೆ ಡಿಜಿಟಲ್ ತಂತ್ರಜ್ಞಾನಗಳ ಅನ್ವಯಿಸುವಿಕೆ ಕ್ಲಿಷ್ಟಕರವಾದ ಸಂಗತಿಯಾಗಿದೆ. ಏಕೆಂದರೆ ಪೂರ್ವಭಾವಿಯಾಗಿ ಜನರಿಗೆ ತಲುಪಿಸುವಲ್ಲಿ ಅತೀ ಜಾಗರೂಕತೆ ಮತ್ತು ತಿಳವಳಿಕೆ ನಿರ್ವಹಣೆಯು ಬಹು ಸವಾಲಾಗಿದೆ. ಕೆಲ್ವಿನ್.ಸಿ (2019) ರ ಪ್ರಕಾರ ಇದು ಗ್ರಾಹಕರ ಅಗತ್ಯತೆಗಳನ್ನು ಹೊಂದಿಸುವ ಮತ್ತು ತಿಳಿಸುವ ಮೂಲಕ ಗ್ರಾಹಕರ ಜ್ಞಾನವನ್ನು ಸುಧಾರಿಸುವ ಪೂರೈಸುವ ಅಂಶಗಳನ್ನು ವ್ಯಕ್ತಪಡಿಸುವಲ್ಲಿ ಡಿಜಿಟಲ್ ಮಾಧ್ಯಮಗಳು ಸೂಕ್ತವೆನಿಸಿವೆ. ಅಭಿವೃದ್ಧಿ ಹೊಂದುವ ಹಂತದಲ್ಲಿ ಡಿಜಿಟಲ್‌ನ ಮಹತ್ವವನ್ನು ಸಾಮಾಜಿಕವು ಅರಿತುಕೊಂಡಿದೆ ಎಂದು ವ್ಯಕ್ತಪಡಿಸಿದ್ದಾರೆ.

ಡಿಜಿಟಲ್ ಮಾಧ್ಯಮವು ಭವಿಷ್ಯದ ಮಾಧ್ಯಮ ಎಂದು ಎಲ್ಲೆಡೆ ಪರಿಗಣಿಸಲ್ಪಟ್ಟಿದೆ. ಇದೊಂದು ಸಾರ್ವಜನಿಕರ ಆಲೋಚನೆಗಳನ್ನು ಮತ್ತು ಅಭಿಪ್ರಾಯಗಳನ್ನು ಪ್ರತಿನಿಧಿಸಿ ಸಾಧಿಸುವ ಭವಿಷ್ಯದ ವೇದಿಕೆಯಾಗಿದೆ ಎಂದು ಮಾರ್ಚ್10, 2021 ರಂದು ಈ ಟಿವಿ ಭಾರತ ವೆಬ್‌ತಾಣದ ವರದಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

**ಸಮಸ್ಯೆಯ ವ್ಯಾಖ್ಯಾನ**

ಪ್ರಸ್ತುತ ಈ ಅಧ್ಯಯನವು ಡಿಜಿಟಲ್ ಮಾಧ್ಯಮಗಳು ತನ್ನ ಬಳಕೆದಾರರ ಮೇಲೆ ಪೂರ್ವಭಾವಿಯಾಗಿ ಸುದ್ದಿ ಮತ್ತು ಮಾಹಿತಿಗಳನ್ನು ತಲುಪಿಸುವಲ್ಲಿ ಯಾವ ರೀತಿ ಪರಿಣಾಮ ಬೀರುತ್ತಿದೆ ಎಂಬುವುದನ್ನು ತಿಳಿಯುವುದಾಗಿದೆ ಮತ್ತು ಬಿಕ್ಕಟ್ಟಿನ ನಿರ್ವಹಣೆಯ ಸಂದರ್ಭದಲ್ಲಿ ಯಾವ ರೀತಿ ಜನರ ಮೇಲೆ ಅನಕೂಲ ಸಾಧಿಸಿವೆ ಎಂಬ ಧೋರಣೆಯನ್ನು ಕಂಡುಕೊಳ್ಳುವುದು ಈ ಅಧ್ಯಯನದ ಉದ್ದೇಶವಾಗಿದೆ.

**ಅಧ್ಯಯನದ ವಿಧಾನ**

ಸಂಶೋಧನಾ ಲೇಖನವು ದತ್ತಾಂಶ ಸಂಗ್ರಹಕ್ಕಾಗಿ ಗುಣಾತ್ಮಕ ವಿಧಾನವನ್ನು ಆಧರಿಸಿದೆ. ದ್ವಿತೀಯ ದತ್ತಾಂಶ ಮೂಲಾಧಾರಗಳಾದ ನಿಯತಕಾಲಿಕೆ ಪತ್ರಿಕಾ ವರದಿಗಳು ಮತ್ತು ಅಪ್ಲಿಕೇಷನ್ ಬಳಸುವ ಬಳಕೆದಾರರು ಒದಗಿಸಿದ ಮಾಹಿತಿಗನುಗುಣವಾಗಿ ಸಂಗ್ರಹಿಸಲಾಗಿದೆ ಕೈಪಿಡಿಗಳು ಮತ್ತು ಅಂತರ್ಜಾಲಗಳನ್ನಾಧರಿಸಿ ಈ ಸಂಶೋಧನಾ ಲೇಖನವನ್ನು ಸಿದ್ಧಪಡಿಸಲಾಗಿದೆ.

**ದತ್ತಾಂಶ ವಿಶ್ಲೇಷಣೆ**

ಪ್ರಸ್ತುತ ದಿನಗಳಲ್ಲಿ ಪೂರ್ವಭಾವಿಯಾಗಿ ಡಿಜಿಟಲ್ ಮಾಧ್ಯಮಗಳು ಜನಜೀವನ ನಿರ್ವಹಣೆಯ ಮೇಲೆ ಅಗಾಧ ಪರಿಣಾಮ ಬೀರಿದೆ. ಬಿಕ್ಕಟಿನ ಸಂದರ್ಭದಲ್ಲಿ ಸಾಮಾಜಿಕ ಜನಜೀವನದ ಉಳಿವು ಇದರ ಮೇಲೆ ಅವಲಂಬಿತವಾಗಿದೆ ಹಾಗೂ ಅಭಿವೃದ್ಧಿಯ ಹಂತದಲ್ಲಿ ಇವು ಭವಿಷ್ಯದ ನಿರ್ಧಾರಗಳನ್ನು ನಿರ್ಣಾಯಕ ಮಾಡುವಲ್ಲಿ ಡಿಜಿಟಲ್ ಮಾಧ್ಯಮಗಳು ಬಹುಹಿಡಿತವನ್ನು ಸಾಧಿಸಿವೆ ಎಂದು ಸಕಾರಾತ್ಮಕ ಧೋರಣೆಯನ್ನು ತಳೆದಿವೆ ಆದರೆ ಇನ್ನೊಂದೆಡೆ ಇವು ಜನರನ್ನು ಭಯ ಭೀತಿಗೊಳಿಸಿ ಸುಳ್ಳು ಸುದ್ದಿಗಳ ಮೂಲಕ ಜನರನ್ನು ಆತಂಕಗೀಡಾಗಿ ಮಾಡುತ್ತವೆ ಎಂದು ತಿಳಿದು ಬಂದಿರುವಂತ ಫಲಿತಾಂಶವಾಗಿರುತ್ತದೆ.

**ವಿಷಯ ಮಂಡನೆ**

ಡಿಜಿಟಲ್ ಮಾಧ್ಯಮಗಳು ಪ್ರಕೃತಿ ವಿಕೋಪ. ಬಿಕ್ಕಟ್ಟಿನ ಮತ್ತು ಅಪಾಯಕಾರಿ ಸಂದರ್ಭಗಳಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಈ ಮಾಧ್ಯಮಗಳು ಜನರ ಬದುಕನ್ನು ಉಳಿಸುವ ಮತ್ತು ಅನಾಹುತಗಳನ್ನು ತಪ್ಪಿಸುವ ಸಾಧನಗಳಾಗಿ ಇಂದಿನ ಸಾಮಾಜಿಕಸ್ಥಿತಿಗತಿಯಲ್ಲಿ ಮುಂಚೂಣಿ ಹೊಂದಿವೆ. ಇತ್ತೀಚಿಗೆ ಜನಜೀವನವನ್ನು ತಲ್ಲಣಗೊಳಿಸಿದ ಸಾಂಕ್ರಾಮಿಕ ರೋಗವಾದ ಕೊವಿಡ್–19 ರ ಸಂದರ್ಭದಲ್ಲಿ ಡಿಜಿಟಲ್ ಮಾಧ್ಯಮಗಳು ಅತ್ಯಂತ

ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಿವೆ ಎಂಬುವುದು ಅಕ್ಷರಶಃಸತ್ಯದ ಸಂಗತಿಯಾಗಿದೆ. ಹೀಗೆ ಡಿಜಿಟಲ್ ಮಾಧ್ಯಮಗಳ ಶಕ್ತಿ ಜಗತ್ತನ್ನೇ ಕಿರಿದಾಗಿಸಿವೆ ಕಾರಣ ಪ್ರಸ್ತುತ ಎಲ್ಲಾ ಕಾರ್ಯಕ್ಷೇತ್ರ ವಲಯಗಳು ತಂತ್ರಜ್ಞಾನಕ್ಕೆ ಹೊರಳಿಕೊಳ್ಳುತ್ತಿವೆ.

ಸರಿಯಾದ ಸಮಯದಲ್ಲಿ ಮಹತ್ವದ ವಿಷಯಗಳನ್ನು ಏಕಕಾಲಕ್ಕೆ ಜನರಿಗೆ ಮುಟ್ಟಿಸುವ ಕೆಲಸವನ್ನು ಡಿಜಿಟಲ್ ಮಾಧ್ಯಮಗಳು ಮಾಡುತ್ತವೆ. ಹೀಗೆ ಜನರ ಹಿತವನ್ನು ಕಾಪಾಡುವ ದೃಷ್ಟಿಯಿಂದ ಇವುಗಳು ಕಾರ್ಯನಿರ್ವಹಿಸುತ್ತವೆ. ಸದ್ಯದ ಪರಿಸ್ಥಿಯನ್ನು ಊಹಿಸುವುದಾದರೆ ಪ್ರಸ್ತುತ ಕೊವಿಡ್ 19 ಬಿಕ್ಕಟ್ಟಿನ ಸಂದರ್ಭದಲ್ಲಿ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಿದಂತ ಸಂದರ್ಬದಲ್ಲಿ ವಿದ್ಯಾರ್ಥಿಗಳ ಕಲಿಕೆಗೆ, ಜಾಗೃತಿಗೆ ಮತ್ತು ಪ್ರಕೃತಿ ವಿಕೋಪ ಸಂದರ್ಭಗಳಲ್ಲಿ ಹವಾಮಾನ ಮುನ್ಸೂಚಣೆಗೆ ಮತ್ತು ಅಂತರ್ಜಾಲ ಮಾರುಕಟ್ಟೆ ವ್ಯವಹಾರಗಳಿಗೆ ಡಿಜಿಟಲ್ ಮಾಧ್ಯಮದ ವೇದಿಕೆಗಳು ಬಹು ಸಹಕಾರಿಯಾಗಿವೆ. ಇಂತಹ ಬಿಕ್ಕಟ್ಟಿನ ಸಂದರ್ಭಗಳಲ್ಲಿ ಜನರಿಗೆ ಮಾಹಿತಿ ಅಗತ್ಯವಾಗಿರುತ್ತದೆ. ಅಂತಹ ಮಾಹಿತಿಗಳನ್ನು ಜನರ ಮನೆಗೆ ವಯಕ್ತಿಕವಾಗಿ ತಲುಪಿಸುವ ಕಾರ್ಯ ನಿರ್ವಹಿಸುತ್ತವೆ.

ಇದು ಸಮಾಜದಲ್ಲಿ ಸಾಮಾಜಿಕ ಕಾರ್ಯಗಳನ್ನು ಒದಗಿಸುವ ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವ ಹಾಗೂ ಅದರ ಅಭಿಪ್ರಾಯಗಳನ್ನು ಉಂಟುಮಾಡುವಂತಹ ಪ್ರಮುಖ ಧ್ಯೇಯಗಳನ್ನು ಹೊಂದಿವೆ. ಡಿಜಿಟಲ್‌ನಿಂದ ಪಡೆಯುವ ಮಾಹಿತಿಯು ಸಾಮಾನ್ಯ ಮೂಲಭೂತವಾದ ಅವಶ್ಯಕತೆಯಾಗಿದೆ. ನಮಗೆ ಒದಗಿಸುವ ಸಂವಹನ ಮಾಹಿತಿಯು ಕಾರ್ಯ ಮತ್ತು ನಿರ್ವಹಣೆಯನ್ನು ಸಾಧಿಸುವ ಮಾರ್ಗವಾಗಿದೆ. ಇದು ಆರೋಗ್ಯ ಮನರಂಜನೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಡಿಜಿಟಲ್ ಮಾಧ್ಯಮಗಳು ಸಕಾರತ್ಮಕ ಮತ್ತು ನಕಾರತ್ಮಕವಾಗಿ ಪ್ರಭಾವಗಳನ್ನು ಉಂಟುಮಾಡಲು ಸಮರ್ಥವಾಗಿವೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿರುವ ಆಗಿರುವ ಕ್ರಾಂತಿಯಿಂದಾಗಿ ಇತರೆ ಮಾಧ್ಯಮಗಳು ಡಿಜಿಟಲ್‌ಗೆ ಪೈಪೋಟಿಯನ್ನು ಎದುರಿಸುವಂತ ಸನ್ನಿವೇಶ ಈಗಾಗಲೇ ಬಂದಿದೆ ಎಂದು ಹೇಳಬಹುದು. ಇದರ ಪ್ರಸಾರವು ಜೀವನದ ಗುಣಮಟ್ಟವನ್ನು ಮತ್ತು ಅವಲಂಬಿಸುವ ರೂಢಿಯನ್ನು ಉತ್ತೇಜಿಸಲು ಸಮರ್ಥವಾಗಿವೆ. ಸಾಂಕ್ರಾಮಿಕ ಪ್ರಕರಣಗಳಲ್ಲಿ ಸಾರ್ವಜನಿಕರಿಗೆ ಜಾಗೃತಿ ಮತ್ತು ಅರಿವನ್ನು ಮೂಢಿಸಲು ಡಿಜಿಟಲ್ ಮಾಧ್ಯಮಗಳು ಸಹಾಯಕವಾಗಿವೆ. ಇಂದು ಶೈಕ್ಷಣಿಕ ಮಾಧ್ಯಮದಲ್ಲಿ ಡಿಜಿಟಲ್ ಮಾಧ್ಯಮಗಳು ವಿದ್ಯಾರ್ಥಿಗಳ ಜನಜೀವನವನ್ನು ಸುಧಾರಿಸುವಲ್ಲಿ ಜಾಲತಾಣಗಳು ವೆಬ್‌ಸೈಟ್‌ಗಳು ಮತ್ತು ಮೊಬೈಲ್ ಅಪ್ಲಿಕೆಷನ್‌ಗಳ ಮುಖೇನ ಸಂವಹನಗಳ ಅಭಿವೃದ್ಧಿಗೆ ಹೊಂದಿಕೊಳ್ಳುವ ಅನೇಕ ಹೊಸ ಕಲಿಕಾ ಮಾರ್ಗಗಳನ್ನು ಹೊಂದಿ ಪ್ರಮುಖ ಪಾತ್ರ ವಹಿಸಿ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸಹಾಯಕಾರಿಯಾಗಿವೆ.

ಇದರಲ್ಲಿ ಸಂವಹನ ಮಾಹಿತಿಯು ತ್ವರಿತ ಕಲಿಕೆಯ ಗುಂಪುಗಳಿಗೆ ಮತ್ತು ಅಂತರ್ಜಾಲ ಕೋರ್ಸ್‌ಗಳಿಗೆ, ಕಾರ್ಯಾಗಾರಗಳಿಗೆ ಹಾಗೂ ತರಗತಿಗಳಿಗೆ ಸಹ ಡಿಜಿಟಲ್ ಮಾಧ್ಯಮಗಳು ಸಹ ಅನುಮತಿಸುತ್ತವೆ. ಇದಲ್ಲದೇ ಅಂಕಿ ಅಂಶಗಳು ಸುದ್ದಿಗಳು ಪುಸ್ತಕಗಳು, ಇತರೆ ಪಠ್ಯವಿಷಯಾಧಾರಿತ ಮಾಹಿತಿಗಳ ದತ್ತಾಂಶವು ಲಭ್ಯವಾಗಿವೆ. ಉದಾಹರಣೆಗೆ ಬಳಕೆದಾರರನ್ನು ನೇರವಾಗಿ ಸಂಪರ್ಕಿಸಲು ಡಿಜಿಟಲ್ ಮಾಧ್ಯಮಗಳನ್ನು ಒಂದು ಸಂಪರ್ಕ ಮಾರ್ಗವಾಗಿ ಬಳಸಲಾಗುತ್ತಿದೆ. ಅಂದರೆ ಡಿಜಿಟಲ್‌ನ ವಿಭಜಿತ ಸಾಧನಗಳನ್ನು ಪರ್ಯಾಯ ಮಾಧ್ಯಮಗಳಾಗಿ ಬಳಸುತ್ತೆವೆ. ಮುದ್ರಣ ಮಾಧ್ಯಮ ಮತ್ತು ವಿದ್ಯುನ್ಮಾನ ಮಾಧ್ಯಮವು ಒಂದೇ ನಾಣ್ಯದ ಎರಡು ಮುಖಗಳು ಆದರೆ ಇಂದು ಸಮೂಹ ಮಾಧ್ಯಮಗಳಲ್ಲಿ ಪತ್ರಿಕೆ ಮತ್ತು ದೂರದರ್ಶನ ರೇಡಿಯೋ ಹೊಸ ಸವಾಲುಗಳನ್ನು ಎದುರಿಸುವಂತೆ ಮಾಡಿದ್ದು ಡಿಜಿಟಲ್ ಮಾಧ್ಯಮ. ಡಿಜಿಟಲ್ ಎಂಬುವುದು ಇಂದು ಅಚ್ಚರಿಯ ರೀತಿಯಲ್ಲಿ

ಬೆಳೆಯುತ್ತಿದೆ. ಇದನ್ನು ಬೆಳೆಸಿದ್ದು ತಂತ್ರಜ್ಞಾನ ಮತ್ತು ಆವಿಷ್ಕಾರ.

ಇಪ್ಪತ್ತು ವರ್ಷಗಳ ಸುದ್ದಿ ಮಾಧ್ಯಮಗಳ ಮೇಲೆ ಡಿಜಿಟಲೀಕರಣ ಎಂಬ ತಂತ್ರಜ್ಞಾನ ಗಣನೀಯ ಪರಿಣಾಮ ಮತ್ತು ಪ್ರಭಾವವನ್ನುಂಟು ಮಾಡಿದೆ. ರಾಯಿಟರ್ಸ್ ಇನ್ಸ್ಟ್ಯೂಟ್ ಆಫ್ ಸ್ಟಡಿ ಜರ್ನಸಲಿಂ ವರದಿಯ ಪ್ರಕಾರ ಶೇ 12 ರಷ್ಟು ಬಳಕೆದಾರರು ಸಾಮಾಜಿಕ ಮಾಧ್ಯಮಗಳೇ ಸುದ್ದಿನ ಪ್ರಮುಖ ಮೂಲ ಎಂದು ಹೇಳಬಹುದು. ಡಿಜಿಟಲ್ ಮಾಧ್ಯಮವು ಸಂಪೂರ್ಣವಾಗಿ ಪತ್ರಿಕೋದ್ಯಮದ ಪರಿಕಲ್ಪನೆಯನ್ನು ಬದಲಾಯಿಸಿಬಿಟ್ಟಿದೆ. ಡಿಜಿಟಲ್ ಮಾಧ್ಯಮಗಳಾದ ವಾಟ್ಸಪ್, ಫೇಸ್ಬುಕ್, ಟ್ವೀಟರ್, ಇನ್ಸ್ಟಾಗ್ರಾಂ ಮುಂತಾದವುಗಳೆಲ್ಲವೂ ಅತೀ ಶೀಘ್ರದಲ್ಲಿ ಸುದ್ದಿಗಳನ್ನು ಪ್ರಸಾರ ಮಾಡುವುದರಿಂದ ಜನರಿಗೆ ಮಾಹಿತಿಯನ್ನು ತಿಳಿಯಲು ಅನಕೂಲಕರವಾಗಿದೆ.

ಒಂದು ಬಿಕ್ಕಟ್ಟನ್ನು ಅರ್ಥಪಡಿಸಲು ಮಾಧ್ಯಮವು ಸ್ಫೂರ್ತಿದಾಯಕ ಮತ್ತು ಪರಿಣಾಮಕಾರಿಯಾಗಿ ಜಾಗೃತಿ ಮೂಡಿಸವುದರೊಂದಿಗೆ ಅದರ ಸಾಧಕ ಬಾಧಕಗಳನ್ನು ಉತ್ತೇಜಿಸಲು ವಿಡಿಯೋದ ಒಂದು ಕಲ್ಪನೆಯನ್ನು ವಿನ್ಯಾಸಗೊಳಿಸುವುದಾಗಿದೆ. ಕಲ್ಪನೆಗಳನ್ನು ಹಂಚಿಕೊಳ್ಳುವುದಕ್ಕಾಗಿ ಡಿಜಿಟಲ್ ಮಾಧ್ಯಮದ ವೇದಿಕೆಗಳು ಅವರ ಸಂದೇಶಗಳನ್ನು ಸಂವಹನ ಮಾಡಲು ಇದೊಂದು ಮೆಚ್ಚಿನ ವಿಧಾನವಾಗಿದೆ. ಸುದ್ದಿ ಸಂಸ್ಥೆಗಳು ಸುದ್ದಿಯ ಸಂಗ್ರಹ ಹಾಗೂ ಪ್ರಕಟಣೆಗಾಗಿ ಸಾಕಷ್ಟು ಮಾನವ ಸಂಪನ್ಮೂಲ ಹಾಗೂ ಹಣವನ್ನು ವ್ಯಯಿಸುತ್ತಿವೆ. ಅತ್ಯುತ್ತಮ ಸುದ್ದಿಗಳು, ಪರಿಶೀಲಿಸಿದ ವಾಸ್ತವ ಸುದ್ದಿ ವರದಿಗಳನ್ನು ಸಂಪಾದಿಸಿ ಪ್ರಕಡಿಸುವಲ್ಲಿ ಡಿಜಿಟಲ್ ಮಾಧ್ಯಮಗಳು ಸಾಕಷ್ಟು ಶ್ರಮ ವಹಿಸುತ್ತಿವೆ. ನೈಸರ್ಗಿಕ ದುರಂತಗಳು, ಕೋಮು ಸಂಘರ್ಷ ಅಥವಾ ಕರೋನಾ ವೈರಸ್ ರೀತಿಯ ವೈದ್ಯಕೀಯ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಪತ್ರಕರ್ತರು ಜೀವ ಲೆಕ್ಕಿಸದೇ ಡಿಜಿಟಲ್ ಮಾಧ್ಯಮಗಳ ಮುಖೇನ ಸಾರ್ವಜನಿಕ ಹಿತಾಸಕ್ತಿಗೋಸ್ಕರ ಕಾರ್ಯ ನಿರ್ವಹಿಸಿದ್ದಾರೆ.

ಸಾರ್ವಜನಿಕರ ಹಿತದೃಷ್ಟಿಯಿಂದ ಡಿಜಿಟಲ್ ಮಾಧ್ಯಮವು ಸ್ವತಂತ್ರವಾಗಿ ಮಾಹಿತಿ ನೀಡುವ ವೇದಿಕೆಗಳಾಗಿ ಕಾರ್ಯ ನಿರ್ವಹಿಸುತ್ತಿವೆ. ಈ ರೀತಿಯಾಗಿ ಡಿಜಿಟಲ್ ಮಾಧ್ಯಮಗಳು ತನ್ನ ವಿಭಜಿತ ಇತರೆ ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ಸುದ್ದಿಗಳಿಂದ ಜನರಿಗೆ ರಕ್ಷಣೆ ನೀಡುತ್ತವೆ. ಆತಂಕಕಾರಿ ಸನ್ನಿವೇಶಗಳ ಸೃಷ್ಟಿಯಾಗೋದನ್ನು ತಪ್ಪಿಸುತ್ತವೆ. ಈ ವಿಚಾರದಲ್ಲಿ ಡಿಜಿಟಲ್ ಮಾಧ್ಯಮಗಳು ನಿಖರವಾದ ವರದಿಯನ್ನು ನೀಡುವುದರ ಜೊತೆಗೆ ಸುಳ್ಳು ಸುದ್ದಿ ಹಾಗೂ ದಾರಿ ತಪ್ಪಿಸುವ ವೈರಲ್ ಸುದ್ದಿಗಳಿಂದ ತಕ್ಷಣತೆಗೆ ರಕ್ಷಣೆಯನ್ನು ಒದಗಿಸುತ್ತವೆ. ಡಿಜಿಟಲ್ ಮಾಧ್ಯಮಗಳು ಸುದ್ದಿಗೆ ಮಾತ್ರ ಸೀಮಿತವಾಗಿರದೇ ಮನರಂಜನೆ ಸಾಹಿತ್ಯ, ಸಂಸ್ಕೃತಿ, ಆರೋಗ್ಯ, ವಾಣಿಜ್ಯ ತಂತ್ರಜ್ಞಾನ ಕ್ಷೇತ್ರಗಳ ಒಳನೋಟಗಳನ್ನು ಪೂರ್ವಭಾವಿಯಾಗಿಯೂ ಸಹ ವ್ಯಕ್ತಪಡಿಸುತ್ತವೆ. ಇದು ಅನನ್ಯವಾಗಿ ಮತ್ತು ಅದರ ಮೂಲದ ರೀತಿಯಲ್ಲಿ ಪ್ರಸ್ತುತಪಡಿಸಲಾದ ಹೊಸ ಮಾಹಿತಿಯು ಸಾರ್ವಜನಿಕರನ್ನು ಸೆಳೆಯುತ್ತವೆ. ಎಲ್ಲಾ ಕ್ಷೇತ್ರವಲಯಗಳಲ್ಲಿ ಡಿಜಿಟಲ್ ಮಾಧ್ಯಮಗಳು ಇಂದು ಪೂರ್ವಭಾವಿಯಾಗಿ ಬಳಕೆದಾರರಿಗೆ ಜಾಗೃತಿ ಅರಿವು ಮತ್ತು ಮುನ್ಸೂಚನೆಗಳನ್ನು ಸಹ ಅವಧಿ ಮತ್ತು ದಿನಾಂಕ ಸ್ಥಳಗಳನ್ನು ಸಹ ವ್ಯಕ್ತಪಡಿಸುವುದರಿಂದ ಸಾರ್ವಜನಿಕರಿಗೆ ತಿಳಿಸುವಲ್ಲಿ ಸಹಾಯಕಾರಿಯಾಗಿವೆ. ಇದೊಂದು ಮುಂದುವರೆದ ಮತ್ತು ಅಭಿವೃದ್ಧಿಯ ಮಾಧ್ಯಮವಾಗಿದೆ ಎಂದು ಹೇಳಬಹುದು.

**ಸಲಹೆಗಳು**

ಬಳಕೆದಾರರಿಗೆ ಜಾಗೃತಿ ಮೂಡಿಸುವಲ್ಲಿ ಡಿಜಿಟಲ್ ಮಾಧ್ಯಮಗಳು ಬಹುಜಾಗರೂಕತೆಯಿಂದ ವ್ಯಕ್ತಪಡಿಸಬೇಕು ಮತ್ತು ಮನೋಸ್ಥೈರ್ಯದ ಮೇಲೆ ಒತ್ತಡ ಹೇರಬಾರದು, ಸುಳ್ಳು ವರದಿ ಮತ್ತು ಮಾಹಿತಿಯನ್ನು ವ್ಯಕ್ತಪಡಿಸಿ ಜನರನ್ನು ಆತಂಕಕ್ಕೀಡು

ಮಾಡಬಾರದು, ಪ್ರಕಟಣೆ ನಂತರ ಬದಲಾವಣೆಗಳಿದ್ದಲ್ಲಿ ತಕ್ಷಣ ವ್ಯಕ್ತಪಡಿಸಬೇಕು. ಮೂಲಾಧರಗಳಿಲ್ಲದೇ ಅಂದಾಜಿಸಿ ಮಾಹಿತಿಯನ್ನು ವ್ಯಕ್ತಪಡಿಸಬಾರದು.

**ಉಪಸಂಹಾರ**

ಡಿಜಿಟಲ್ ಮಾಧ್ಯಮಗಳು ಇಂದು ಎಲ್ಲ ಕ್ಷೇತ್ರಗಳ ಅಭಿವೃದ್ಧಿಯ ಮದ್ದಾಗಿದೆ. ಇಂದು ಬಹುತೇಕ ಜನ ಜೀವನ ವರ್ತಮಾನ ಮತ್ತು ಭವಿಷ್ಯದ ನಿರ್ಧಾರದ ಸೂಚಕಗಳಾಗಿ ಕಾರ್ಯನಿರ್ವಹಿಸುತ್ತವೆ. ಅನಾಹುತಗಳನ್ನು ತಪ್ಪಿಸುವ ಮತ್ತು ಅದನ್ನು ವೇಗವಾಗಿ ಪಸರಿಸುವ ಮಾಧ್ಯಮವಾಗಿದೆ. ಡಿಜಿಟಲ್ ಮಾಧ್ಯಮಗಳು ಜನರನ್ನು ತಲುಪುವ ನಿಟ್ಟಿನಲ್ಲಿ ಅದರ ಪ್ರಸ್ತುತತೆಯ ಭಿನ್ನ ಸ್ವರೂಪವನ್ನೆ ಬದಲಿಸಿಕೊಂಡವು. ಇದೊಂದು ವಿಶಿಷ್ಠ ಶೈಲಿಯ ಮೂಲ ಸ್ವರೂಪವನ್ನು ಹೊಂದಿದ್ದರಿಂದ ಜನರಿಗೆ ಜಾಗೃತಿಯ ತಿಳುವಳಿಕೆಯ ಮಾಧ್ಯಮವಾಗಿದೆ. ಇದು ಮಾಹಿತಿಯನ್ನು ಮತ್ತು ಜನರ ಮನಸ್ಸನ್ನು ನಿಯಂತ್ರಣ ಮಾಡುವುದರಲ್ಲಿ ಡಿಜಿಟಲ್ ಮಾಧ್ಯಮಗಳ ಕೊಡುಗೆ ಅಪಾರವಾದ್ದು. ಜನರು ಬದುಕುತ್ತಿರುವ ಪ್ರಪಂಚ ಮತ್ತು ಪ್ರಾಕೃತಿಕಕ್ಕೆ ಸಂಬಂಧಿಸಿದ ಆಗುಹೋಗುಗಳನ್ನು ಡಿಜಿಟಲ್ ಮಾಧ್ಯಮಗಳು ಕೇಂದ್ರಿಕರಿಸಿದಷ್ಟು ಇತ 'ರ ಮಾಧ್ಯಮಗಳು ಹೊಂದಿಲ್ಲ. ಹೀಗೆ ಡಿಜಿಟಲ್ ಮಾಧ್ಯಮಗಳು ತನ್ನ ತಿರುವನ್ನೇ ಬದಲಾಯಿಸಿತು.

**ಪರಾಮರ್ಶನ/ಆಕರ ಗ್ರಂಥಗಳು**


- Gupta, S. (2023, September 21). Impact of Digital Media on Our Society, Future & Lifestyle. *Incrementors*. https://www.incrementors.com/blog/impact-of-digital-media/
- Kawamoto, K. (2003). *Media and society in the digital age*. Addison-Wesley Longman.
- Lindgren, S. (2017). *Digital media and society*. SAGE.
- Pavlik, J. V. (2001). *Journalism and new media*. https://doi.org/10.7312/pavl11482
- Potter, J., & McDougall, J. (2017). *Digital media, culture and education: Theorising Third Space Literacies*. Springer.
- Toews, D. (2018). *Social life and political life in the era of digital media: Higher Diversities*. Routledge.